ಎನ್. ಜಗನ್ನಾಥ ಪ್ರಕಾಶ್

# ವಕೀಲಿ ವೃತ್ತಿಯಿಂದ ಕಲಾಸೇವೆಯೆಡೆಗೆ...

ಮನರಂಜನೆಯ ಜೊತೆಗೆ ಮನೋವಿಕಾಸಕ್ಕೂ ನಾಟಕಗಳು ತೋರು ದೀಪವಾಗಬೇಕೆನ್ನುವ ಉದ್ದೇಶದಿಂದಲೇ ರಂಗಭೂಮಿಗೆ ಕಾಲಿಟ್ಟು ಯಶಸ್ವಿಯಾದ ಕಲಾವಿದರಲ್ಲಿ ಬಳ್ಳಾರಿ ರಾಘವ ಅವರು ಪ್ರಮುಖರು.

ಸಾಂಸ್ಕೃತಿಕ ಹಿನ್ನೆಲೆಯ ಕುಟುಂಬ, ಕನ್ನಡ ಹಾಗೂ ತೆಲುಗು ಭಾಷೆಗಳ ಬಳ್ಳಾರಿ ವಾತಾವರಣದಲ್ಲಿ ಬೆಳೆದ ರಾಘವ ಅವರಿಗೆ ಶಾಲಾ ದಿನಗಳಲ್ಲಿಯೇ ನಾಟಕಗಳತ್ತ ಒಲವಿದ್ದರೂ ಶಿಕ್ಷಣದ ಕಡೆಗೆ ಹೆಚ್ಚಿನ ಆದ್ಯತೆ ಕೊಟ್ಟು ವಕೀಲಿ ಪದವಿಯನ್ನು ಗಳಿಸಿ ವೃತ್ತಿಗಿಳಿದರು.

ವಕೀಲಿ ವೃತ್ತಿಯಲ್ಲಿ ಸಾಕಷ್ಟು ಆದಾಯವಿದ್ದ ಕಾಲದಲ್ಲಿಯೇ ಕಲಾ ಸೇವೆಯತ್ತ ಹೆಜ್ಜೆ ಹಾಕಿದರೂ ರಾಘವರು ವೃತ್ತಿಯನ್ನು ಪೂರ್ಣವಾಗಿ ಬಿಡಲಿಲ್ಲ. ವೃತ್ತಿಯಿಂದ ಗಳಿಸಿದ್ದನ್ನು ಪ್ರವೃತ್ತಿಗೆ ಬಳಸುವ ಮಾರ್ಗದಲ್ಲಿ ನಡೆದ ಅವರು ರಂಗಭೂಮಿಗೆ ಪದಾರ್ಪಣೆ ಮಾಡಿದ್ದು ಕೋಲಾಚಲಂ ಶ್ರೀನಿವಾಸ ರಾವ್ ಅವರ 'ಸುಮ ಮನೋ ವಿಲಾಸ ನಾಟಕ ಸಭಾ' ಮೂಲಕ.

ಶಾಲಾ ದಿನಗಳಲ್ಲಿ ನಾಟಕಗಳಲ್ಲಿ ನಟಿಸಿ ಅಭ್ಯಾಸವಿದ್ದ ರಾಘವರು ವೃತ್ತಿರಂಗಭೂಮಿಯಲ್ಲಿ ಪಳಗಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಆಜಾನುಬಾಹು ಶರೀರ, ಸುಂದರ ಮುಖ, ಕಂಚಿನ ಕಂಠ ಎಲ್ಲವೂ ರಾಘವರ ವ್ಯಕ್ತಿತ್ವದಲ್ಲಿ ಸೇರಿ ಹೋಗಿದ್ದವು. ಯಾವುದೇ ಪಾತ್ರಕೊಟ್ಟರೂ ಅದಕ್ಕೊಂದು ಹೊಸ ಸ್ಪರ್ಶ ನೀಡುವ ಕಲಾವಿದರೆಂಬ ಅಭಿಪ್ರಾಯ ನಾಟಕ ಮಂಡಲಿಯಲ್ಲಿ ಆರಂಭದಿಂದಲೇ ಇತ್ತು. ಹಾಗಾಗಿ ರಾಘವರಿಗೆ ಸಿಕ್ಕಿದ್ದೆಲ್ಲ ಪ್ರಮುಖ ಪಾತ್ರಗಳೇ. ಪೌರಾಣಿಕ, ಐತಿಹಾಸಿಕ, ಚಾರಿತ್ರಿಕ ಹೀಗೆ ಯಾವುದೇ ಪ್ರಕಾರದ ನಾಟಕವಾದರೂ ಅದರಲ್ಲಿ ತಾವು ಅಭಿನಯಸುವ ಪಾತ್ರಕ್ಕೆ ತಮ್ಮದೇ ಆದ ಛಾಪು ಮೂಡಿಸುವಲ್ಲಿ ಬಳ್ಳಾರಿ ರಾಘವರು ಯಶಸ್ವಿಯಾಗುತ್ತಿದ್ದರು. ಹೊಸ ಹೊಸ ಅಭಿನಯ ವಿಧಾನಗಳನ್ನು ಅನ್ವೇಷಿಸುವ ಜಾಡನ್ನು ಹಿಡಿದು ಸಾಗಿದ ರಾಘವ, ಸಾಂಪ್ರದಾಯಿಕ ಅಭಿನಯ ಮನೋಭಾವವನ್ನು ಬದಲಿಸಿದ ಕಲಾವಿದ.